# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ
## ಚನ್ನರಾಯಪಟ್ಟಣ

C.C.NO.2715/2014

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಸರಸ್ವತಿ | C.W – 1 |
| ಗಂಡನ ಹೆಸರು | ಃ | ರಂಗಸ್ವಾಮಿ | |
| ವಯಸ್ಸು | ಃ | 38 ವರ್ಷ | |
| ಉದ್ಯೋಗ | ಃ | ಗೃಹಿಣಿ | ಪ್ರಮಾಣ ವಚನ ಬೋಧಿಸಲಾಯಿತು |
| ವಾಸ | ಃ | ನಲ್ಲೂರು ಗ್ರಾಮ | ದಿನಾಂಕಃ **06-03-2021** |

---

**ಮುಖ್ಯ ವಿಚಾರಣೆ** ಃ-ಶ್ರೀ ಕೆ ಜೆ ಡಿ ವಕೀಲರಿಂದ

1 ನೇ ಆರೋಪಿ ನನ್ನ ಗಂಡ . 19 ನೇ ಆರೋಪಿ 1 ನೇ ಆರೋಪಿಯ ಜೊತೆ ವಿವಾಹವಾಗಿದ್ದಾರೆ . ದಿನಾಂಕ 07-08-2006 ರಂದು ನನ್ನ ಅಣ್ಣ ಚುಂಚನಗಿರಿ ಗಂಗಾಧರೇಶ್ವರ ದೇವಸ್ಥಾನಕ್ಕೆ ಹೋಗಿದ್ದಾಗ ಆರೋಪಿ 1 ಮತ್ತು 19 ರವರು ಮದುವೆಯಾಗುತ್ತಿದ್ದರು ಎಂದು ತಿಳಿಸಿರುತ್ತಾರೆ . ಸದರಿ ವಿಚಾರವನ್ನು ಮಹೇಶ ,ಮೂರ್ತಿ ಮತ್ತು ಮಂಜು ರವರು ನನಗೆ ತಿಳಿಸಿರುತ್ತಾರೆ . 1 ರಿಂದ 18 ನೇ ಆರೋಪಿಗಳು ಮತ್ತು 20 ಮತ್ತು 21 ನೇ ಆರೋಪಿಗಳು 1 ಮತ್ತು 19 ನೇ ಆರೋಪಿಗಳಿಗೆ ಮದುವೆಯಾುಗುವಂತೆ ಕುಮ್ಮಕ್ಕು ನೀಡಿರುತ್ತಾರೆ . ಆರೋಪಿ 1 ಮತ್ತು 19 ರವರ ಮದುವೆ ತಾಳಿ ಮತ್ತು ಇತರೆ ಪೂಜಾ ಸಾಮಾಗ್ರಿಗಳು ಹಾಗೂ ಶಾಸ್ತ್ರದ ಸಾಮಾಗ್ರಿಗಳು ಇದ್ದು, ಮದುವೆಯಾಗಿರುತ್ತದೆಂದು ತಿಳಿಸಿರುತ್ತಾರೆ . ಆದ್ದರಿಂದ ಆರೋಪಿಗೆ ಶಿಕ್ಷೆ ವಿಧಿಸಬೇಕೆಂದು ಕೇಳಿಕೊಳ್ಳುತ್ತೇನೆ .

ಪಾಟೀ ಸವಾಲುಃ- ಶ್ರೀ ಡಿ ಎಸ್ ಯು ವಕೀಲರಿಂದ

ನನ್ನ ತಂದೆಯ ಹೆಸರು ತಿರುಮಲೇಗೌಡ . ನನ್ನನ್ನು ಎನ್ ಟಿ ಸರಸ್ವತಿ ಎಂತಲೂ ಕರೆಯುತ್ತಾರೆ ಎಂದರೆ ಸರಿ . 1 ಮತ್ತು 19 ನೇ ಆರೋಪಿ ಮದುವೆಯಾಗುವುದನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ. ಆಧಿಚುಂಚನಗಿಗಿರಿ ದೇವಸ್ಥಾನದಲ್ಲಿ ಪೋಲಿಸ್ ಉಪ ಠಾಣೆ ಇದೆ ಎಂದರೆ ನನಗೆ ಗೊತ್ತಿಲ್ಲ. ಬೆಳ್ಳೂರಿನಲ್ಲಿ ಪೋಲಿಸ್ ಠಾಣೆ ಇದೆ ಎಂದರೆ ನನಗೆ ಗೊತ್ತಿಲ್ಲ. ಈ

ಸಂಬಂಧ ಕಿಕ್ಕೇರಿ ಪೋಲಿಸ್ ಠಾಣೆಗೆ ದೂರು ನೀಡಿರುತ್ತೇನೆ . 2006 ರಲ್ಲಿ ನೀಡಿರುತ್ತೇನೆ . ಈ ಸಂಬಂಧ ದಾಖಲೆ ಹಾಜರುಮಾಡಲು ಯಾವುದೇ ತೊಂದರೆ ಇಲ್ಲ. ನಾನು ಬೆಂಗಳೂರಿನಲ್ಲಿ ವಾಸವಾಗಿದ್ದೇನೆಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ನೀಡಲಾಯಿತು .

(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸ.ಇ.ಎ.ಒ.,**

**(ಎಸ್.ಚೆನ್ನಸ್ವಾಮಿ)**
**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಚನ್ನರಾಯಪಟ್ಟಣ.**